

ಆರಿಫ್ ರಾಜಾ

# ನನ್ನ ಆಫ್ರಿಕಾ ಸಾವಿರ ಬಣ್ಣಗಳ ಕಾಮನಬಿಲ್ಲು

ಲೇಖಕಿ, ಪತ್ರಕರ್ತೆ: **ಬೆರ್ ಅನೇನಾ**
ದೇಶ: **ಉಗಾಂಡ**



**ಬೆರ್ ಅನೇನಾ ಸಂದರ್ಶನ**

ಹರಿತವಾದ ರೂಪಕಗಳ ಭಾಷೆಯಲ್ಲಿ ಮಾತನಾಡುವ ಬರ್ ಅನೆನಾ ಉಗಾಂಡಾದ ಉದಯೋನ್ಮುಖ ಕವಿ, ಕಥೆಗಾರ್ತಿ, ಪತ್ರಕರ್ತೆ. ಮೊದಲು ಹೆರಿಯೆಟ್ ಅನೇನಾ ಎಂಬ ಹೆಸರಿನಲ್ಲಿ ಬರೆಯುತ್ತಿದ್ದರು. 2018ರ ವೋಲೆ ಷೋಯಿಂಕಾ ಪ್ರಶಸ್ತಿ ವಿಜೇತ ‘A Nation in Labour’ ಕೃತಿಯ ಮೂಲಕ ಬೆಳಕಿಗೆ ಬಂದರು. ಪ್ರಸ್ತುತ ಅಮೆರಿಕದ ವಿಶ್ವವಿದ್ಯಾಲಯವೊಂದರಲ್ಲಿ ಸೃಜನಶೀಲ ಬರವಣಿಗೆ ಕುರಿತು ಪಿಎಚ್‌ಡಿ ಮಾಡುತ್ತಿದ್ದಾರೆ. ಇವರ ಬಾಲ್ಯವು ಉಗಾಂಡದ ಸರ್ಕಾರ ಮತ್ತು The Lord's Resistance Armyಯ ಬಲಪಂಥೀಯ ಬಂಡುಕೋರರ ನಡುವೆ ಜರುಗಿದ ಎರಡು ದಶಕಗಳ ಅಂತರ್ಯುದ್ಧದಲ್ಲಿ ಕಳೆದುಹೋಗಿದೆ. ಅಕೋಲಿ ಮನೆಮಾತಾದರೂ ಅನೇನಾ ಇಂಗ್ಲಿಷ್‌ನಲ್ಲಿ ಬರೆಯುತ್ತಾರೆ. ಬಹುತೇಕ ಇವರ ಬರಹದ ವಸ್ತು ವಿಷಯ ಪ್ರೇಮದ ಮೌಲ್ಯ ಮತ್ತು ಯುದ್ಧದ ಕರಾಳತೆ. ಆಧ್ಯಾತ್ಮಿಕ ಮೌಲ್ಯಗಳನ್ನು ಬದಿಗೊತ್ತಿದ ಬಂಡವಾಳಶಾಹಿ ಮಾರುಕಟ್ಟೆ, ಮತ್ತದರಿಂದ ವಿರೂಪಗೊಂಡ ಸಾಮಾಜಿಕ ಮೌಲ್ಯವ್ಯವಸ್ಥೆಯನ್ನು ಅನೇನಾ ಸಾಹಿತ್ಯ ಪ್ರಶ್ನಿಸುತ್ತದೆ.

◆ **ನಿಮ್ಮ ಬಾಲ್ಯ ಹಾಗೂ ಪರಿಸರದ ಬಗ್ಗೆ ತಿಳಿಸಿ? ಯಾವುದಾದರೂ ಮರೆಯಲಾಗದ ಘಟನೆ ಹಂಚಿಕೊಳ್ಳಿ.**

ನಾನು ಹುಟ್ಟಿ ಬೆಳೆದಿದ್ದು ಉತ್ತರ ಉಗಾಂಡದಲ್ಲಿ. ನನ್ನ ಬಾಲ್ಯದ ಶೇಂಗಾ ಮತ್ತು ಮೆಕ್ಕೆ ಜೋಳದ ಹೊಲಗಳು ನೆನಪಾಗುತ್ತವೆ. ಗೆಣಸು ಹುಡುಕಿ ಸುಟ್ಟು ತಿನ್ನುತ್ತಿದ್ದ ದಿನಗಳು ನೆನಪಾಗುತ್ತವೆ. ಭತ್ತದ ಗದ್ದೆಗಳಿಗೆ ಬರುವ ಹಕ್ಕಿಗಳನ್ನ ಓಡಿಸಲು ಹೊಲಕ್ಕೆ ಹೋಗುತ್ತಿದ್ದಂತಹ ಸಡಗರದ ದಿನಗಳನ್ನ ನಾನು ನೆನೆಯುತ್ತೇನೆ. ಡಿಸೆಂಬರ್‌ನ ರಜೆಯಲ್ಲಿ ಆಲೂಗೆಡ್ಡೆಗಳನ್ನು ಮಾರಿ ಬಂದ ಹಣದಲ್ಲಿ ಕೊಂಡುಕೊಂಡ ‘ಹೊಸ’ ಸೆಕೆಂಡ್ ಹ್ಯಾಂಡ್ ಬಟ್ಟೆಗಳನ್ನು ತೊಟ್ಟು ಸಂಭ್ರಮಿಸುತ್ತಿದ್ದ ಕ್ರಿಸ್‌ಮಸ್ ನೆನಪಿಸಿಕೊಳ್ಳುತ್ತೇನೆ. ಅಕೋಲಿ ಜನಪದ ಕಥೆಗಳನ್ನೂ, ಅಷ್ಟೇ ರಸವತ್ತಾಗಿ ನನ್ನ ಅಜ್ಜಿ ಹೇಳುತ್ತಿದ್ದ ಆ ದಿವ್ಯಕ್ಷಣಗಳನ್ನೂ ನೆನೆಯುವೆ.